ಕೃಷಿ ಮಾರುಕಟ್ಟೆ ರಸ್ತೆ ಅಭಿವೃದ್ಧಿ.

4181(4577) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) :— ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೃಷಿ ಮಾರುಕಟ್ಟೆ ಇಲಾಖೆಯಿಂದ ಮೊದಲು ಅಭಿವೃದ್ಧಿಗೆ ಆಯ್ಕೆಮಾಡಿದ ರಸ್ತೆಗಳಿಗೆ ಹಣ ಬಿಡುಗಡೆ ಮಾಡಲಾಗುವುದೇ;

ಆ) ರೈತರು ತಮ್ಮ ಬೆಳೆಯನ್ನು ಮಾರುಕಟ್ಟೆಗೆ ತಂದು ವ್ಯಾಪಾರ ಮಾಡಲು ಸಾರಿಗೆಗಾಗಿ ರಸ್ತೆಗಳನ್ನು ಪುನಃ ಗುರುತಿಸಿ ಅಭಿವೃದ್ಧಿಪಡಿಸಲಾಗುವುದೇ?

ಶ್ರೀ ಆರ್.ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :—

ಅ) ಇಲ್ಲ.

ಆ) ಲೋಕೋಪಯೋಗಿ ಇಲಾಖೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಮತ್ತು ನಗರಸಭೆಗಳ ವ್ಯಾಪ್ತಿಯಲ್ಲಿಲ್ಲದ ಗ್ರಾಮೀಣ ರಸ್ತೆಗಳನ್ನು ಮಾರುಕಟ್ಟೆ ಸಮಿತಿಗಳು ಅಭಿವೃದ್ಧಿಪಡಿಸಿ, ನಿರ್ವಹಿಸುವ ಕುರಿತು ಮತ್ತು ನಗರ, ಪಟ್ಟಣ ಹಾಗೂ ಗ್ರಾಮ ಪರಿಮಿತಿಯಲ್ಲಿ ಪ್ರಾಂಗಣಕ್ಕೆ ಸಂಪರ್ಕ ಕಲ್ಪಿಸುವ 5 ಕಿ.ಮೀವರೆಗಿನ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಹಾಗೂ ಸಮಿತಿಯ ನಿಧಿಯಿಂದ ವಿನಿಯೋಗಿಸುವ ಹಣದ ಮಿತಿ ಕುರಿತು ವಿಧಿವಿಧಾನಗಳನ್ನು ಗೊತ್ತುಪಡಿಸಲು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಾವಳಿಗಳು, 1968ಕ್ಕೆ ಸೂಕ್ತ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ. ಈ ಕುರಿತು ದಿನಾಂಕ 23-1-2000 ರಂದು ಸರ್ಕಾರವು ಪೂರ್ವಭಾವಿ ಅಧಿಸೂಚನೆ ಹೊರಡಿಸಿ ಸಾರ್ವಜನಿಕರಿಂದ ಆಕ್ಷೇಪಣೆ ಸಲಹೆಗಳನ್ನು ಕರೆಯಲಾಗಿದೆ. ಸದರಿ ತಿದ್ದುಪಡಿ ಪ್ರಸ್ತಾಪ ಅಂತಿಮಗೊಳಿಸಿ ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲಾಗುವುದು.

ಆಶ್ರಯ ಯೋಜನೆ.

4148(4582) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ):— ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪ್ರಸಕ್ತ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು ;

ಅ) ಹಾಗಿದ್ದಲ್ಲಿ ಉಡುಪಿ ಜಿಲ್ಲೆಯ ಮತ್ತು ತಾಲ್ಲೂಕುಗಳಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು; ಫಲಾನುಭವಿಗಳಿಗೆ ಸರ್ಕಾರದಿಂದ ಬರಬೇಕಾಗಿರುವ ಹಣವೆಷ್ಟು;

ಆ) ಈ ಬಾಕಿಯನ್ನು ಫಲಾನುಭವಿಗಳಿಗೆ ಎಷ್ಟು ಸಮಯದಲ್ಲಿ ಪಾವತಿ ಮಾಡಲಾಗುವುದು?

ಶ್ರೀ ಖಿಮರುಲ್ ಇಸ್ಲಾಂ (ವಸತಿ ಸಚಿವರು):—

ಅ)

ಗ್ರಾಮೀಣ	ನಗರ
1,30,000	25,000

ಆ) ಉಡುಪಿ ಜಿಲ್ಲೆಗೆ ಮನೆಗಳನ್ನು ತಾಲ್ಲೂಕುವಾರು ಹಂಚಿರುವುದಿಲ್ಲ. ಕ್ಷೇತ್ರವಾರು ಹಂಚಲಾಗಿದೆ.

ಕ್ರ.ಸಂ	ಜಿಲ್ಲೆಯ/ಕ್ಷೇತ್ರದ ಹೆಸರು	ನಗರ	ಗ್ರಾಮೀಣ
1	ಉಡುಪಿ	250	175
2	ಕಾಪು		700
3	ಬ್ರಹ್ಮಾವರ	44 ಸಾಲಿಗ್ರಾಮ	700
4	ಕುಂದಾಪುರ	70	700
5	ಬೈಂದೂರು	-	700
6	ಕಾರ್ಕಳ	60	700

ಗ್ರಾಮೀಣ ಆಶ್ರಯ ವಸತಿ ಯೋಜನೆಯಡಿ ರೂ.10,000,00ಗಳನ್ನು ಸಹಾಯಧನವಾಗಿ ಹಾಗೂ ರೂ. 10,000,00 ಗಳನ್ನು ಸಾಲದ ಹಣವಾಗಿ ನೀಡಲಾಗುತ್ತಿದೆ. ನಗರ ಆಶ್ರಯ ವಸತಿ ಯೋಜನೆಯಡಿ ರೂ. 25,000,00ಗಳನ್ನು ಸಾಲವಾಗಿ ನೀಡಲಾಗುತ್ತಿದೆ. ಹಾಗೂ ಫಲಾನುಭವಿಗಳು ರೂ. 5,000,00ಗಳ ವಂತಿಕೆಯನ್ನು ನೀಡಬೇಕಾಗಿರುತ್ತದೆ. ಜಿಲ್ಲೆಯ ಗುರಿ ಅನುಸಾರ ಜಿಲ್ಲಾವರು ಹಂತ ಹಂತವಾಗಿ ಪ್ರಗತಿಯನ್ನಾಧರಿಸಿ ಹಣ ಬಿಡುಗಡೆ ಮಾಡಲಾಗುತ್ತದೆ.

ಇ) ನಿರ್ಮಾಣದ ಪ್ರಗತಿಯನ್ನು ಆಧರಿಸಿ ಹಂತಹಂತವಾಗಿ ಹಣಕಾಸನ್ನು ಬಿಡುಗಡೆ ಮಾಡಲಾಗುವುದು.